ಓ .ಎಸ್ . ನಂ. 293/2012 ಡಿಡಬ್ಲ್ಯೂ 1

**ದಿನಾಂಕ 01.04.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಡಿ.ಎಸ್.ಬಿ. ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಅಂಶಗಳ ಬಗ್ಗೆ ನನಗೆ ತಿಳಿದಿರುತ್ತದೆ. ನಿಡಿ-13ರ ಜಿ.ಪಿ.ಎ. ಪತ್ರದಲ್ಲಿ ಪ್ರಸ್ತುತ ದಾವೆಯ ವ್ಯವಹಾರಗಳ ಬಗ್ಗೆ ಹಾಗೂ ದಾವಾ ಆಸ್ತಿಯ ವಿಸ್ತೀರ್ಣ, ಖಾತೆ, ಕಂದಾಯಗಳ ಬಗ್ಗೆ ನಮೂದಿಸಿಲ್ಲ. ನಿಡಿ-13ರ ಜಿ.ಪಿ.ಎ. ಪತ್ರವನ್ನು ನಾನು ಓದಿರುತ್ತೇನೆ. ನಿಡಿ-13 ರಲ್ಲಿ ಸ್ವತ್ತಿನ ಖಾತೆ ಮತ್ತು ಚೆಕ್ಕುಬಂಧಿಯನ್ನು ನಮೂದಿಸಿಲ್ಲ ಎಂದರೆ ಸರಿ. ನಿಡಿ-13 ರಲ್ಲಿರುವ ಆಸ್ತಿಯ 1992ರ ಮೂಲ ಕ್ರಯಪತ್ರವನ್ನು ನೋಡಿರುತ್ತೇನೆ. 1ನೇ ಪ್ರತಿವಾದಿಗೆ ಸದರಿ ಆಸ್ತಿ ಹೇಗೆ ಬಂತು ಎಂಬುದರ ಬಗ್ಗೆ ದಾಖಲೆ ನೋಡಿರುತ್ತೇನೆ. ಸದರಿ ಆಸ್ತಿಯನ್ನು ಎಂ.ನಟರಾಜ್ ರವರು 1ನೇ ವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಯು ಎಂ.ನಟರಾಜ್ ರವರಿಗೆ ತಮ್ಮ ತಂದೆಯಿಂದ ಬಂದಿರುತ್ತದೆ. ಎಂ.ನಟರಾಜ್ ರವರ ಸಹೋದರ, ಸಹೋದರಿಯರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಎಂ.ನಟರಾಜ್ ರವರ ತಂದೆಗೆ ಹೇಗೆ ಅಂದರೆ ಅವರಿಗೆ ಸ್ವಯಾರ್ಜಿತವಾಗಿ ಅಥವಾ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿ ಸದರಿ ಆಸ್ತಿಯನ್ನು 2003ನೇ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ.

ಸದರಿ ಆಸ್ತಿಯು ಮೂಲತಃ ಡಿ.ಎಂ. ಲಿಂಗಯ್ಯನವರಿಗೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿ.ಎಂ. ಲಿಂಗಯ್ಯನವರ ದಿನಾಂಕ 17.05.1956 ರಂದು ವಾದಿಯವರ ತಂದೆ ಗದ್ದುಗೆ ಮಾದಯ್ಯನವರ ಪರ ಷರತ್ತುಬದ್ಧ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-6ರ ದಿನಾಂಕ 17.05.1956 ರ ದಾನಪತ್ರದಲ್ಲಿ ಡಿ.ಎಂ. ಲಿಂಗಯ್ಯನವರು ದಾವಾ ಆಸ್ತಿಯು ಗದ್ದುಗೆ ಮಾದಯ್ಯನವರು ತಮ್ಮ ಜೀವಿತ ಕಾಲದಲ್ಲಿ ಅನುಭವಿಸಿ ಅವರ ಮರಣದ ನಂತರ ಸದರಿ ಆಸ್ತಿಯು ಅವರ ವಾರಸುದಾರರುಗಳಿಗೆ ಭಾಧ್ಯ ಪಡುತ್ತದೆ ಎಂದು ಷರತ್ತು ವಿಧಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗದ್ದುಗೆ ಮಾದಯ್ಯನವರಿಗೆ ದಾವಾ ಆಸ್ತಿಯನ್ನು ವರ್ಗಾವಣೆ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಗದ್ದುಗೆ ಮಾದಯ್ಯನವರು ನಟರಾಜುರವರ ಪರ ಯಾವುದೇ ವಿಲ್ ಬರೆಯಲು ತಮಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 09.01.1987ರ ವಿಲ್ ದಾಖಲೆ ಕಾನೂನುಬಾಹಿರ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 09.01.1987ರ ವಿಲ್ ಪತ್ರದ ಆಧಾರದ ಮೇಲೆ ನಮ್ಮಗಳ ಪರ ಯಾವುದೇ ಹಕ್ಕು ಭಾಧ್ಯತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಗದ್ದುಗೆ ಮಾದಯ್ಯನವರ ಮಕ್ಕಳಾದ 1 ರಿಂದ 3ನೇ ವಾದಿ ಹಾಗೂ ನಟರಾಜುರವರಿಗೆ ಭಾಧ್ಯಪಟ್ಟ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಗದ್ದುಗೆ ಮಾದಯ್ಯನವರ ಮಕ್ಕಳ ನಡುವೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ನಟರಾಜುರವರು ದಿನಾಂಕ 09.01.1987 ರಂದು ವಿಲ್ ನ್ನು ಸೃಷ್ಟಿಮಾಡಿಕೊಂಡು ನಮ್ಮ ಪರ ಬರೆದುಕೊಟ್ಟಿರುವ ದಾಖಲೆಗಳ ಆಧಾರದ ಮೇಲೆ ನಮಗೆ ಯಾವುದೇ ಹಕ್ಕು, ಭಾಧ್ಯತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಪರ ನಟರಾಜುರವರು ಬರೆದುಕೊಟ್ಟಿರುವ ಪತ್ರಗಳಿಗೆ 1 ರಿಂದ 3ನೇ ವಾದಿಗಳು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಟರಾಜುರವರು ಏಕಪಕ್ಷೀಯವಾಗಿ

ಬರೆದುಕೊಟ್ಟಿರುವ ಪತ್ರಗಳಿಗೆ 1 ರಿಂದ 3ನೇ ವಾದಿಗಳು ಬಾಧ್ಯರಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಗದ್ದುಗೆ ಮಾದಯ್ಯನವರ ಮಕ್ಕಳ ನಡುವೆ ವಿಭಾಗ ಆಗದೇ ಇರುವ ಕಾರಣ, ಸಂಪೂರ್ಣ ಆಸ್ತಿಯನ್ನು ಮಾರಾಟ ಮಾಡಲು ನಟರಾಜುರವರಿಗೆ ಯಾವುದೇ ಹಕ್ಕು, ಭಾದ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಪರ ಹಾಗೂ ಪ್ರತಿವಾದಿ 1 ರಿಂದ 3 ರವರ ಪರ ಆಗಿರುವ ದಾಖಲೆಗಳು ಕಾನೂಬಾಹಿರ ದಾಖಲೆಗಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳ ಆಧಾರದ ಮೇಲೆ ನಮ್ಮ ಪರ ಯಾವುದೇ ಹಕ್ಕು, ಭಾದ್ಯತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾವುಗಳು ಕಾನೂನು ಬಾಹಿರ ಕ್ರಯಪತ್ರಗಳ ಆಧಾರದ ಮೇಲೆ ದಾವಾ ಆಸ್ತಿಯ ಮಾಲೀಕರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ

**ದಿನಾಂಕ 01.04.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ಶ್ರೀ ಡಿ.ಎಸ್.ಬಿ. ವಾದಿ ಪರ ವಕೀಲರಿಂದಃ**

ನಾವು ಖರೀದಿ ಮಾಡಿದ್ದೇವೆ ಎಂದು ಹೇಳಲಾಗುವ ಪೂರ್ವ–ಪಶ್ಚಿಮ 30 ಅಡಿಗಳು, ಉತ್ತರ–ದಕ್ಷಿಣ 90 ಅಡಿಗಳ ಆಸ್ತಿಯು ಮೂಲತಃ ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯನ್ನು 2ನೇ ಪ್ರತಿವಾದಿ ನಟರಾಜುರವರಿಂದ ಖರೀದಿ ಮಾಡಿದ್ದರು, ನಂತರ 2ನೇ ಪ್ರತಿವಾದಿಯಿಂದ ಸದರಿ ಆಸ್ತಿಯನ್ನು ನಾವು ಖರೀದಿ ಮಾಡಿರುತ್ತೇವೆ. ಸದರಿ ಆಸ್ತಿಯು ಎಂ.ನಟರಾಜ್ ರವರಿಗೆ ತಮ್ಮ ತಂದೆಯಿಂದ ಬಂದಿರುತ್ತದೆ. ಎಂ.ನಟರಾಜ್ ರವರ ಸಹೋದರ, ಸಹೋದರಿಯರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಎಂ.ನಟರಾಜ್ ರವರ ತಂದೆಗೆ ಹೇಗೆ ಅಂದರೆ ಅವರಿಗೆ ಸ್ವಯಾರ್ಜಿತವಾಗಿ ಅಥವಾ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 2002ನೇ ಸಾಲಿನಲ್ಲಿ ನಮ್ಮ ತಂದೆ ಖರೀದಿ ಮಾಡಿರುತ್ತಾರೆ.

ಸದರಿ ಆಸ್ತಿಯು ಮೂಲತಃ ಡಿ.ಎಂ. ಲಿಂಗಯ್ಯನವರಿಗೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿ.ಎಂ. ಲಿಂಗಯ್ಯನವರ ದಿನಾಂಕ 17.05.1956 ರಂದು ವಾದಿಯವರ ತಂದೆ ಗದ್ದುಗೆ ಮಾದಯ್ಯನವರ ಪರ ಷರತ್ತುಬದ್ಧ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–6ರ ದಿನಾಂಕ 17.05.1956 ರ ದಾನಪತ್ರದಲ್ಲಿ ಡಿ.ಎಂ. ಲಿಂಗಯ್ಯನವರು ದಾವಾ ಆಸ್ತಿಯು ಗದ್ದುಗೆ ಮಾದಯ್ಯನವರು ತಮ್ಮ ಜೀವಿತ ಕಾಲದಲ್ಲಿ ಅನುಭವಿಸಿ ಅವರ ಮರಣದ ನಂತರ ಸದರಿ ಆಸ್ತಿಯು ಅವರ ವಾರಸುದಾರರುಗಳಿಗೆ ಭಾದ್ಯ ಪಡುತ್ತದೆ ಎಂದು ಷರತ್ತು ವಿಧಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗದ್ದುಗೆ ಮಾದಯ್ಯನವರಿಗೆ ದಾವಾ ಆಸ್ತಿಯನ್ನು ವರ್ಗಾವಣೆ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಗದ್ದುಗೆ ಮಾದಯ್ಯನವರು ನಟರಾಜುರವರ ಪರ ಯಾವುದೇ ವಿಲ್ ಬರೆಯಲು ತಮಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 09.01.1987ರ ವಿಲ್ ದಾಖಲೆ ಕಾನೂನುಬಾಹಿರ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 09.01.1987ರ ವಿಲ್ ಪತ್ರದ ಆಧಾರದ ಮೇಲೆ ನಮ್ಮಗಳ ಪರ ಯಾವುದೇ ಹಕ್ಕು ಭಾಧ್ಯತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಗದ್ದುಗೆ ಮಾದಯ್ಯನವರ ಮಕ್ಕಳಾದ 1 ರಿಂದ 3ನೇ ವಾದಿ ಹಾಗೂ ನಟರಾಜುರವರಿಗೆ ಭಾಧ್ಯಪಟ್ಟ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಗದ್ದುಗೆ ಮಾದಯ್ಯನವರ ಮಕ್ಕಳ ನಡುವೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ನಟರಾಜುರವರು ದಿನಾಂಕ 09.01.1987 ರಂದು ವಿಲ್ ನ್ನು ಸೃಷ್ಟಿ ಮಾಡಿಕೊಂಡು ನಮ್ಮ ಪರ ಬರೆದುಕೊಟ್ಟಿರುವ ದಾಖಲೆಗಳ ಆಧಾರದ ಮೇಲೆ ನಮಗೆ ಯಾವುದೇ ಹಕ್ಕು, ಭಾಧ್ಯತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಪರ ನಟರಾಜುರವರು ಬರೆದುಕೊಟ್ಟಿರುವ ಪತ್ರಗಳಿಗೆ 1 ರಿಂದ 3ನೇ ವಾದಿಗಳು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಟರಾಜುರವರು ಏಕಪಕ್ಷೀಯವಾಗಿ ಬರೆದುಕೊಟ್ಟಿರುವ ಪತ್ರಗಳಿಗೆ 1 ರಿಂದ 3ನೇ ವಾದಿಗಳು ಬಾಧ್ಯರಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಗದ್ದುಗೆ ಮಾದಯ್ಯನವರ ಮಕ್ಕಳ ನಡುವೆ ವಿಭಾಗ ಆಗದೇ ಇರುವ ಕಾರಣ, ಸಂಪೂರ್ಣ ಆಸ್ತಿಯನ್ನು ಮಾರಾಟ

ಮಾಡಲು ನಟರಾಜುರವರಿಗೆ ಯಾವುದೇ ಹಕ್ಕು, ಭಾಧ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಪರ ಹಾಗೂ ಪ್ರತಿವಾದಿ 1 ರಿಂದ 3 ರವರ ಪರ ಆಗಿರುವ ದಾಖಲೆಗಳು ಕಾನೂಬಾಹಿರ ದಾಖಲೆಗಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳ ಆಧಾರದ ಮೇಲೆ ನಮ್ಮ ಪರ ಯಾವುದೇ ಹಕ್ಕು, ಭಾಧ್ಯತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾವುಗಳು ಕಾನೂನು ಬಾಹಿರ ಕ್ರಯಪತ್ರಗಳ ಆಧಾರದ ಮೇಲೆ ದಾವಾ ಆಸ್ತಿಯ ಮಾಲೀಕರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ